ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ನವೆಂಬರ್ 2020


॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-20 ಸಂಚಿಕೆ-11 ಪುಟಗಳು-6 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ಹಾಗೂ ವಿಜಯದಶಮಿ







ತಾರೀಕು 17.10.2020ರಿಂದ 25.10.2020ರ ತನಕ ಉಡುಪಿಯ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯ ವತಿಯಿಂದ ನವರಾತ್ರಿಯನ್ನು ಸಡಗರದಿಂದ ಆಚರಿಸಲಾಯಿತು. ಕೊರೋನಾ ಭೀತಿ ಇದ್ದರೂ ಭಕ್ತರು ತುಂಬಾ ಭಕ್ತಿಯಿಂದ ಹಾಗೂ ಸಡಗರದಿಂದ ಪೂಜೆ ಪುನಸ್ಕಾರಗಳಲ್ಲಿ ಪಾಲ್ಗೊಂಡರು. ಪ್ರತೀ ದಿನ ಸಂಜೆ 5.00 ರಿಂದ ಸಂಘದ ವತಿಯಿಂದ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯನ್ನು ಸತತ ಒಂಭತ್ತು ದಿನಗಳ ಕಾಲ ನಡೆಸಲಾಯಿತು. ಸುಮಾರು 22 ಮಂದಿ ಸೇವಾದಾರರು ಶ್ರೀ ದುರ್ಗಾ ನಮಸ್ಕಾರ ಪೂಜೆಯನ್ನು ನೆರವೇರಿಸಿ ದೇವಿಯ ಕೃಪೆಗೆ ಪಾತ್ರರಾದರು.

ವಿಜಯದಶಮಿ ದಿನವಾದ 25.10.2020ರಂದು ಎಂದಿನಂತೆ ಚಂಡಿಕಾಯಾಗವನ್ನು ನೆರವೇರಿಸಲಾಯಿತು. ಪೂರ್ಣಾಹುತಿ ಹಾಗೂ ಮಹಾಪೂಜೆಯ ನಂತರ ನೂತನವಾಗಿ ನವೀಕರಿಸಲಾದ ಭೋಜನ ಶಾಲೆಯನ್ನು ಸಮಾಜಕ್ಕೆ ಮರು ಸಮರ್ಪಿಸಲಾಯಿತು. ಇದಕ್ಕಾಗಿ ಸರಳ ಸಮಾರಂಭವನ್ನು ಏರ್ಪಡಿಸಿ ಸಂಘದ ಮಾಜಿ ಅಧ್ಯಕ್ಷರುಗಳಿಂದ ದೀಪವನ್ನು ಬೆಳಗಿಸಿ ಉದ್ಘಾಟಿಸಲಾಯಿತು. ಮರು ನವೀಕರಣದ ಇಂಜಿನಿಯರ್ ಹಾಗೂ ಇದೀಗ ಉಡುಪಿಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕಗೊಂಡಿರುವ ಶ್ರೀ ರಾಘವೇಂದ್ರ ಕಿಣಿ ಇವರನ್ನು ಸನ್ಮಾನಿಸಲಾಯಿತು.

ಡಾ। ವೈ. ಸುದರ್ಶನ್ ರಾವ್ ಇವರು ಕಾರ್ಯಕ್ರಮದ ನಿರ್ವಹಣೆಯನ್ನು ಮಾಡಿದರು. ಶ್ರೀ ಪ್ರಭಾಕರ ಭಂಡಿಯವರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಜಯರಾಮ ರಾವ್, ಮಾಜಿ ಅಧ್ಯಕ್ಷರುಗಳಾದ ಶ್ರೀ ಸಿ.ಎಸ್. ರಾವ್, ಶ್ರೀ ವೈ.ಭುವನೇಂದ್ರ ರಾವ್, ಶ್ರೀ ಪ್ರಫುಲ್ಲಚಂದ್ರ ರಾವ್ ಹಾಗೂ ಶ್ರೀ ಪಾಲಚಂದ್ರ ರಾವ್ ಇವರು ವೇದಿಕೆಯಲ್ಲಿದ್ದು ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದರು. ನೂತನವಾಗಿ ನಿರ್ಮಿಸಲಾದ ಯಾಗ ಶಾಲೆಯಲ್ಲಿ ಪ್ರಥಮ ಚಂಡಿಕಾಯಾಗವನ್ನು ನೆರವೇರಿಸಲಾಯಿತು. ಶ್ರೀ ಟಿ.ಸುರೇಶ್ ರಾವ್ ದಂಪತಿಗಳು ಕರ್ತೃಗಳಾಗಿ ಸಹಕರಿಸಿದರು. ಶ್ರೀ ಜಗದೀಶ್ ಉಪಾಧ್ಯಾಯ ನೇತೃತ್ವದ ವೈದಿಕರು ಚಂಡಿಕಾಯಾಗದ ಧಾರ್ಮಿಕ ವಿಧಿವಿಧಾನಗಳನ್ನು ಸುಸೂತ್ರವಾಗಿ ನೆರವೇರಿಸಿದರು. ಭೋಜನಶಾಲೆಯ ಉದ್ಘಾಟನಾ ಸಮಾರಂಭದ ನಂತರ ಸಮಾಜಬಾಂಧವರು ಹಾಗೂ ಪರಿಸರದ ಭಕ್ತರು ಪ್ರಸಾದ ಭೋಜನವನ್ನು ಸ್ವೀಕರಿಸಿದರು.




ಶುಭಾಶಯಗಳೊಂದಿಗೆ

**ಡಾ। ವಿಜಯಾ ರಾವ್ ವೈ.ಬಿ**
ಎಂ.ಬಿ.ಬಿ.ಎಸ್; ಡಿ.ಜಿ.ಒ.(ಡಿ.ಎನ್.ಬಿ)
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು



ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ
ಫೋನ್ : 9448164327

### ಚಿರಸ್ಮರಣೆ



ಜನನ : 06-04-1949

ನಿಧನ : 25-09-2019

ಮರೆಯಾದರೂ ನೀನು, ಮರೆಯಲಾರೆವು ನಾವು
ಪತಿಯೊಡನೆ ಸಾಂಗತ್ಯದಲ್ಲಿ, ಬಂಧುಗಳೊಡನೆ ಸಾತತ್ಯದಲ್ಲಿ,
ನೆರೆಯೊಡನೆ ಸಾಂತ್ವನದಲ್ಲಿ ಜೊತೆಯಾಗಿ
ಬಾಳಬೆಳಗಿದ ಶೋಭಮ್ಮನವರಿಗೆ ನಮ್ಮೆಲ್ಲರ ನಮನ...

ಶ್ರೀಮತಿ ವಿಮಲಾ ಮತ್ತು
ಶ್ರೀ ಬೈಕಾಡಿ ದೇವರಾಜ
(ನಾಸಿಕ್)
ಮತ್ತು ಕುಟುಂಬ

ಬೈಕಾಡಿ ಡಾ। ಸೂರ್ಯನಾರಾಯಣ ರಾವ್ (ಪತಿ)
ಶ್ರೀಮತಿ ಅನುಪಮಾ ಮತ್ತು
ಶ್ರೀ ಬೆಳ್ಳೆ ರಾಜಶೇಖರ ರಾವ್ (ಮಗಳು-ಅಳಿಯ)
ಶ್ರೀಮತಿ ಡಾ। ಪ್ರಸನ್ನ ಎ.ರಾವ್ ಮತ್ತು
ಶ್ರೀ ಡಾ। ಅನಿಲ್ ಕುಮಾರ್ (ಸೊಸೆ-ಮಗ)
ಮಿಥಿಲ್ ಬೆಳ್ಳೆ, ಅನನ್ಯ, ಅನಂತ

# ಬಾಳಿಗೊಂದು ಹಬ್ಬ – ದೀಪಾವಳಿ

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.




ನಾವು ಕತ್ತಲಿಂದ ಬಂದವರು, ನಡುವೆ ಬೆಳಕಿನಲಿ ನಿಂದವರು, ಮತ್ತೆ ಕತ್ತಲಿನೆಡೆಗೇ ತೆರಳುವವರು. ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ. ನಡೆಸು ನಮ್ಮನ್ನು ಕೆಡುಕಿನಿಂದ ಒಳಿತಿನೆಡೆಗೆ. ನಡೆಸು ನಮ್ಮನ್ನು ಕತ್ತಲೆಯಿಂದ ಬೆಳಕಿನೆಡೆಗೆ. ನಡೆಸು ನಮ್ಮನ್ನು ಮರ್ತ್ಯದಿಂದ ಅಮರ್ತ್ಯದೆಡೆಗೆ. ಈ ನಂಟು ಇಲ್ಲದಿರೆ ಬಾಳು ಕಗ್ಗಂಟು. ಈ ನರಕ ದೂರವಾಗಬೇಕು. ನರಕದಿಂದ ನಾವು ಪಾರಾಗಬೇಕು. ನರಕಾಸುರನ ಸಂಹಾರವಾದಾಗ ಬದುಕು ಬಂಗಾರ ವಾಗುತ್ತದೆ. ಆದ್ದರಿಂದ ನರಕ ಚತುರ್ದಶಿ ಯಂದು ದೀಪ ಬೆಳಗಬೇಕು.

ದ್ವಾಪರಯುಗದಲ್ಲಿ ಪ್ರಾಗ್ಜ್ಯೋತಿಷಪುರ ದಲ್ಲಿ ನರಕಾಸುರನ ಆಡಳಿತವಿತ್ತು. ತನ್ನ ಅತ್ಯಾಚಾರಗಳಿಂದ ಜಗತ್ತೇ ತಲ್ಲಣಿಸುವಂತೆ ಮಾಡಿದ. ನಾರಿಯರೆಂದರೆ ಅವನಿಗೆ ಸ್ವರ್ಗ. ಅವನೆಂದರೆ ನಾರಿಯರಿಗೆ ನರಕ. ಆದ್ದರಿಂದಲೇ ಅವನನ್ನು ಅವರು ನರಕಾಸುರ ಎಂದು ಕರೆದಿರಬೇಕು. ನರರ ಬಾಳು ಅವನಿಂದ ನರಕವಾಯಿತು. ನರರಿಗಿಂತಲೂ ಹೆಚ್ಚು ನಾರಿಯರ ಬಾಳು. ಹದಿನಾರು ಸಾವಿರದ ನೂರು ಮಂದಿ ನಾರಿಯರು ಅವನಿಂದ ಸೆರೆಯಲ್ಲಿ ಬಂಧಿಗಳಾಗಿ ಕಾಲಕಳೆದರು. ಅವರ ಬದುಕಿನಲ್ಲೂ ಕತ್ತಲೆ ಕಳೆದು ದೀಪ ಬಂತು. ದೀಪಾವಳಿ ಬಂತು. ಶ್ರೀಕೃಷ್ಣ ನರಕ ಚತುರ್ದಶಿಯಂದು ಆತನನ್ನು ಸಂಹರಿಸಿ ಲೋಕ ಕಲ್ಯಾಣ ಮಾಡಿದ. ಕೃಷ್ಣ ಹದಿನಾರು ಸಾವಿರದ ನೂರು ನಾರಿಯರ ಕೈ ಹಿಡಿದು ಬೆಳಕಿನೆಡೆಗೆ ನಡೆಸಿದ. ಅವರ ಬದುಕಿನುದ್ದಕ್ಕೂ ಬೆಳಕಿನ ದೀಪಾವಳಿ ತಂದ. ಈ ಶುಭದಿನದಂದು ಪ್ರಾತಃಕಾಲ ತೈಲಾಭ್ಯಂಜನ ಮಾಡಿದರೆ ಗಂಗಾಸ್ನಾನದ ಪುಣ್ಯಸಿಗುತ್ತದೆ ಯಂತೆ. ಲಕ್ಷ್ಮೀಕಟಾಕ್ಷ ಸಿದ್ಧಿಯಾಗುತ್ತದೆ ಯಂತೆ.

ಮೂರು ಲೋಕಗಳ ಬಲವಿದ್ದವ ಬಲಾಢ್ಯ ಬಲಿ ಚಕ್ರವರ್ತಿ. ಅಂತಹ ಬಲವುಳ್ಳ ಬಲಿ ಚಕ್ರವರ್ತಿ ವಾಮನ ರೂಪಿಯಾದ ಭಗವಂತನ ದೈವೀ ಬಲಕ್ಕೆ ಬಲಿಯಾದ.

*ವಾಮನ ರೂಪದ ಅನಂತ ನೀನು*
*ವ್ಯಾಪಿಸಿ ನಿಂತೆ ಜಗತ್ತೆಲ್ಲವನೂ*
*ನೋಡುತ್ತಿರುವಂತೆಯೇ ಲೋಕಗಳು......*
*ಹೇ ತ್ರಿವಿಕ್ರಮನೇ ಎರಡಡಿಯಲಿ*
*ಜಗವೆಲ್ಲವನೂ ವ್ಯಾಪಿಸಿ ನೀನು*
*ಲೋಕಕೆ ದೊರೆಯಾದವನೇ! ಎಲ್ಲಿ*
*ಇರಿಸಲಿ ಮೂರನೆಯ ಅಡಿಯನ್ನು*
*ಹೇಳೆನ್ನುತ ಗರುಡನ ಪಾಶದಲಿ*
*ಬಂಧಿತನಾಗಿದ್ದಂತಹ ಬಲಿಯನು*
*ಕೇಳಲು ಬಾಗಿ ನಮ್ರತೆಯಲಿ ಬಲಿ*
*ಇರಿಸೆನ್ನಯ ಈ ಶಿರದೊಳೆಂದನು.*
*(ಸರಳ ನಾರಾಯಣೀಯ–31–ದಶಕ)*

ಆಗ ವಾಮನನಿಂದ ಬಲಿ ಪಾತಾಳಕ್ಕೆ ತಳ್ಳಲ್ಪಟ್ಟನು. ಬಲಿ ಚಕ್ರವರ್ತಿ ಪ್ರತಿವರ್ಷ ಬಲಿ ಪಾಡ್ಯದಂದು ಪಾತಾಳದಿಂದ ಭೂಮಿಗೆ ಬರುತ್ತಾನೆ. ಪಾತಾಳದಿಂದ ವರ್ಷಕ್ಕೊಂದು ಸಲ ಭೂಲೋಕಕ್ಕೆ ಬಂದು ಮೂರು ದಿನಗಳು ಒಡೆತನವನ್ನು ನಡೆಸುವಂತೆ ವರವನ್ನು ಭಗವಂತನಿಂದ ಪಡೆದ. ಆ ಪ್ರಕಾರ ಬಲಿ ದೀಪಾವಳಿಯ ಸಂದರ್ಭದಲ್ಲಿ ಭೂಮಿಗೆ ಆಗಮಿಸುತ್ತಾನೆ. ಆದ್ದರಿಂದ ಭೂಲೋಕದ ಜನರು ಅವನಿಗೆ ದೀಪಮಾಲೆಗಳಿಂದ ಸ್ವಾಗತಿಸುತ್ತಾರೆ. ಉತ್ತರ ಭಾರತದವರು ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನ ಕಥೆಯನ್ನು ಆಧರಿಸಿ ದೀಪಾವಳಿಯನ್ನು ಆಚರಿಸುತ್ತಾರೆ.

*ಇಂದ್ರನು ಕಳುಹಿದ ದಿವ್ಯರಥವನು*
*ಉಪದೇಶಿಸೆ ರಣಕಳದಿ ಅಗಸ್ತ್ಯನು*
*ಬಂದಾದಿತ್ಯ ಹೃದಯ ಮಂತ್ರವನು*
*ಪ್ರಭು ನೀ ಸಂಹರಿಸಿದೆ ರಾವಣನನು*
*ಅನುಸಂಧಾನ ಮಾಡುತ ದಿವ್ಯ*
*ಬ್ರಹ್ಮಾಸ್ತ್ರವನಾ ರಾಕ್ಷಸಪತಿಯ*
*ಶಿರಗಳ ಕತ್ತರಿಸಿ ಸ್ತುತಿ ಮಾಡಲು*
*ಮೂಲೋಕವು ನಿನ್ನನು ಹರ್ಷದೊಳು....*
*ನೀ ಸೀತಾಲಕ್ಷ್ಮಣರೊಂದಿಗೆ*
*ಕೂಡಿ ಹನುಮ ಸುಗ್ರೀವಾದಿಯರನು*
*ಮರಳಿದೆ ಪುಷ್ಪಕದಲ್ಲಿ ಅಯೋಧ್ಯೆಗೆ....*
*ಬಂತು ಅಯೋಧ್ಯೆಯೇ ನಿನ ಸ್ವಾಗತಿಸಲು.....*
*(ಸರಳ ನಾರಾಯಣೀಯ–35–ದಶಕ)*

ಆಗ ಅಯೋಧ್ಯಾನಗರದ ಜನರು ದೀಪಗಳನ್ನು ಬೆಳಗಿಸಿ ಶ್ರೀರಾಮಚಂದ್ರನನ್ನು ಸ್ವಾಗತಿಸುತ್ತಾರೆ. ವಿಜಯೋತ್ಸವವನ್ನು ಅವರು ಸಂಭ್ರಮದಿಂದ ಆಚರಿಸುತ್ತಾರೆ. ಶ್ರೀರಾಮನ ಆಗಮನವನ್ನು ಸಡಗರದಿಂದ ಆಚರಿಸಲು ದೀಪಗಳ ಹಬ್ಬವನ್ನು ಆಚರಿಸುತ್ತಾರೆ.

ದೀಪಾವಳಿ ಸಂದರ್ಭದಲ್ಲಿ ವಿವಿಧ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳು ಜನರಲ್ಲಿ ಸಾಂಸ್ಕೃತಿಕ ಅಭಿರುಚಿಯನ್ನು ಹೆಚ್ಚಿಸುತ್ತವೆ. ಹಬ್ಬದ ದಿನಗಳಲ್ಲಿ ಸಾಮಾಜಿಕರು ಒಬ್ಬರೊನ್ನೊಬ್ಬರು ಪರಸ್ಪರ ತಿಳಿದುಕೊಳ್ಳುವುದರಿಂದ ತಿಳುವಳಿಕೆ ಏರ್ಪಡುತ್ತದೆ. ಸಂಗೀತ, ಅಭಿನಯ, ನೃತ್ಯ, ಚಿತ್ರಕಲೆಗಳಿಂದ ಹೆಚ್ಚು ಸಂಪರ್ಕ ಬೆಳೆಯುತ್ತದೆ. ಉಪನ್ಯಾಸ ಕಾರ್ಯಕ್ರಮಗಳು, ಭಾಷಣ ಸ್ಪರ್ಧೆಗಳು, ಹೆಚ್ಚು ಮಾಹಿತಿಯನ್ನು ನೀಡುತ್ತವೆ. ಉದಾಹರಣೆಗಾಗಿ, ದೀಪಾವಳಿ ದಿನದ ಸಂಜೆ ಹಲ್ದಂಕರ್‌ಗೆ ಹೇಗೆ ದೀಪಾವಳಿ ಸ್ಫೂರ್ತಿ ನೀಡಿತು? ಹಲ್ದಂಕರ್ ತಮ್ಮ 12 ವರ್ಷದ ಮಗಳು ಗೀತಾ ಕಂಚಿನ ದೀಪವನ್ನು ಹಿಡಿದು ಗಾಳಿಗೆ ಅದು ನಂದಿ ಹೋಗದಂತೆ ಕೈಯನ್ನು ಅಡ್ಡ ಹಿಡಿದುಕೊಂಡು ಕತ್ತಲೆಯಿಂದ ಬೆಳಕಿನೆಡೆಗೆ ಸಾಗುತ್ತಿರುವುದನ್ನು ಕಂಡರು. ತಕ್ಷಣವೇ ಅವರಲ್ಲಿದ್ದ ಕಲಾವಿದ ಜಾಗೃತಗೊಂಡ. ಇದನ್ನೇ ತಮ್ಮ ಚಿತ್ರಕಲೆಯಲ್ಲಿ ಮೂಡಿಸಿದರು. ಮೈಸೂರು ಮಹಾರಾಜರ ಸಂಸ್ಥಾನದಲ್ಲಿ ದಸರಾ ಉತ್ಸವದ ಅಂಗವಾಗಿ ನಡೆದ ಚಿತ್ರಕಲಾ ವಸ್ತು ಪ್ರದರ್ಶನದಲ್ಲಿ ಈ ಕಲಾಕೃತಿ ಪ್ರಥಮ ಸ್ಥಾನ ಪಡೆಯಿತು. ಮೈಸೂರು ಮಹಾರಾಜರು ಈ ಚಿತ್ರವನ್ನು ಮುನ್ನೂರು ರೂ.ಗೆ ಖರೀದಿಸಿ ಅರಮನೆಯಲ್ಲಿ ಇಟ್ಟರು. ಕೆಲವು ವರ್ಷಗಳ ನಂತರ ಫ್ರಾನ್ಸ್‌ನ ಕಲಾಪ್ರೇಮಿಯೊಬ್ಬ 8 ಕೋಟಿ ರೂ.ಗೆ ಖರೀದಿಸಲು ಸಜ್ಜಾಗಿದ್ದರು. ಆದರೆ ಈ ಕಲಾಕೃತಿಯನ್ನು ಮಾರಾಟ ಮಾಡಲು ಮಹಾರಾಜರು ನಿರಾಕರಿಸಿದರು. ಅನಂತರ ಇದು ಶ್ರೀ ಜಯಚಾಮರಾಜೇಂದ್ರ ಆರ್ಟ್ ಗ್ಯಾಲರಿ ಸೇರಿತು. ನಾಡಿನ ಕಲಾವಲಯದಲ್ಲಿ ಇದೊಂದು ಜನಪ್ರಿಯ ಕಲಾಕೃತಿ. ಇದೇ ‘ಗ್ಲೋ ಆಫ್ ಹೋಪ್’ ಕಲಾಕೃತಿ. (ಆಧಾರ : ವಿ.ಕ.ಸುದ್ದಿಲೋಕ)

**ದೀಪಾವಳಿ ಹಬ್ಬ ಧನಲಕ್ಷ್ಮೀ ಪೂಜೆಗೆ ವಿಶೇಷ ಮಹತ್ವ ನೀಡುತ್ತದೆ. ಅಂಗಡಿ ಪೂಜೆಯೇ ಲಕ್ಷ್ಮೀ ಪೂಜೆಯ ಹಬ್ಬವಾಗಿದೆ. ಆಗ ಹೊಸ ವರ್ಷ ಪ್ರಾರಂಭವಾಗುವುದು. ಹೊಸ ಲೆಕ್ಕ ಪುಸ್ತಕಗಳನ್ನು ಬರೆಯುತ್ತಾರೆ. ಲಕ್ಷ್ಮೀ ಪೂಜೆ ಮಾಡಿ ತಮ್ಮ ವ್ಯಾಪಾರ ವ್ಯವಹಾರ ವರ್ಧಿಸಿ ಲಾಭ ಹೆಚ್ಚಾಗಲೆಂದು ಪ್ರಾರ್ಥಿಸಿಕೊಳ್ಳುತ್ತಾರೆ. ಅಂಗಡಿಗಳ ಮುಂದೆ ಪಟಾಕಿ, ಮಾಲೆಪಟಾಕಿ, ನಕ್ಷತ್ರಕಡ್ಡಿ ಹೀಗೆ ಸುಡುಮದ್ದಿನ ಗೌಜಿ ಕಾಣುತ್ತೇವೆ. ಕನಕವೃಷ್ಟಿಯ ಕರೆವುತ ಬಾರೆ| ಮನಕೆ ಮನವಾ ಸಿದ್ಧಿಯ ಮಾಡೆ ॥ ದಿನಕರ ಕೋಟಿ ತೇಜದಿ ಮೆರೆವ । ಜನಕರಾಯನ ಕುಮಾರಿ ಬಾರೆ ॥ ಅತ್ತಿತ್ತಗಲದೆ ಭಕ್ತರ ಮನೆಯಲಿ । ನಿತ್ಯ ಮಹೋತ್ಸವ ನಿತ್ಯ ಸುಮಂಗಲ ॥ ಸತ್ಯಕೆ ತೋರುವ ಸಜ್ಜನರುಗಳಿಗೆ । ಚಿತ್ತಕೆ ಹೊಳೆವ ಪುತ್ತಳಿಗೊಂಬೆ ॥ ಭಾಗ್ಯದಾ ಲಕ್ಷ್ಮಿ ಬಾರಮ್ಮಾ । ನಮ್ಮಮ್ಮ ನೀ ಸೌ । ಭಾಗ್ಯದಾ ಲಕ್ಷ್ಮಿ ಬಾರಮ್ಮಾ ॥ ಪುರಂದರದಾಸರ ಕೀರ್ತನೆಗಳಲ್ಲಿ ಇದು ಒಂದು ಜನಪ್ರಿಯ ಕೀರ್ತನೆ. ಲಕ್ಷ್ಮೀ ಸೌಭಾಗ್ಯದ ಅಧಿದೇವತೆ. ಲಕ್ಷ್ಮೀ ಎಂದರೆ ಕೇವಲ ಹಣ, ಚಿನ್ನ, ಬೆಳ್ಳಿಯಲ್ಲ. ಸೌಭಾಗ್ಯ, ಸಮೃದ್ಧಿ, ಆರೋಗ್ಯ, ನೆಮ್ಮದಿ, ಸುಖ, ತನ್ನವರೊಂದಿಗೆ ನಗುನಗುತ್ತಾ ಬಾಳುವ ಸಂಬಂಧ ಇವೆಲ್ಲವೂ ಬಾಳಿನ ಸೌಭಾಗ್ಯಗಳು. ಆ ಭಾಗ್ಯದ ಅಮೃತಬಿಂದು ನಮ್ಮ ಮನಸ್ಸಿನೊಳಗೆ ಇದೆ.**

**ದೀಪಾವಳಿ ಧಾನ್ಯಲಕ್ಷ್ಮಿಯ ಪೂಜೆ ಕೂಡಾ ಆಗಿದೆ. ದೀಪಾವಳಿ ಹಬ್ಬವೇ ಹೊಸ ಬೆಳೆಯನ್ನು ಮನೆಗೆ ಸೇರಿಸುವ ಧಾನ್ಯಲಕ್ಷ್ಮಿಯ ಪೂಜೆಯಾಗಿದೆ. ಗದ್ದೆಯ ಹಸಿರು ಭತ್ತವನ್ನು ಮನೆಗೆ ತರುವ ಸಮಯವಾಗಿದೆ. ಹೊಸ ಭತ್ತ ತುಂಬಿದ ತಟ್ಟೆಯಲ್ಲಿ ಹಣತೆಯ ದೀಪ ಇಡುತ್ತಾರೆ. ಮನೆ ಅನವರತ ಧನಧಾನ್ಯಗಳಿಂದ ಸಮೃದ್ಧಿಯಾಗಲಿ ಎಂದು ಹಾರೈಸುತ್ತಾರೆ. ಆದ್ದರಿಂದ ಕೃಷಿಕರು ಕೃಷಿಯನ್ನು ಮಾಡಿ ಬೆಳೆಯನ್ನು ಮನೆಗೆ ತರುವ ಸಂತೋಷ ಪಡುವ ಹಬ್ಬ ದೀಪಾವಳಿಯಾಗಿದೆ. ಭೂಮಿ ಪೂಜೆ ಮಾಡುವ ಹಬ್ಬವಾಗಿದೆ. ಇದೇ ಸಮಯದಲ್ಲಿ ಬಲೀಂದ್ರನ ಪೂಜೆ ನಡೆಯುತ್ತದೆ. ಆಗಲೇ ಗೋಪೂಜೆಯನ್ನು ನಿರ್ವಹಿಸುತ್ತಾರೆ. ಕಾರ್ಮಿಕರಿಗೆ ಆಯುಧ ಪೂಜೆ, ನವವಿವಾಹಿತ ವಧುವರರಿಗೆ ಹೊಸ ಹಬ್ಬದ ಔತಣದ ದೀಪಾವಳಿ ಹಬ್ಬವಾಗಿದೆ. ದೀಪಾವಳಿ ಹಬ್ಬದ ಉಡುಗೊರೆ, ಸಿಹಿತಿಂಡಿ ಹಂಚುವುದು ಇತ್ಯಾದಿ ಆ ದಿನ ವಿಶೇಷವಾಗಿ ಮಾಡಲಾಗುತ್ತದೆ. ಎಲ್ಲರಿಗೂ ಭಕ್ಷ್ಯ ಭೋಜನದ ಸಮಯವೇ ದೀಪಾವಳಿ ಹಬ್ಬ.**

**ದೀಪಾವಳಿಗೆ ಸಾಲಾಗಿ ದೀಪದ ಹಣತೆ ಹಚ್ಚಬೇಕು. ಮನೆಯ ನೆಲದ ತುಂಬಾ ದೀಪದ ಹಣತೆಗಳು. ಆಕಾಶದಲ್ಲಿ ನಕ್ಷತ್ರಗಳ ಹಣತೆಗಳು. ಮನೆಗಳ ಮೇಲೆ, ಮಹಡಿಗಳ ಮೇಲೆ ಅಂಗಡಿ ಮಳಿಗೆಗಳ ಮೇಲೆ ಆಕಾಶ ದೀಪಗಳು. ಈಗಂತೂ ವಿವಿಧ ರೀತಿಯ ಆಕರ್ಷಕ ವಿದ್ಯುದ್ದೀಪಗಳು, ದುರುಸು ಪಟಾಕಿ, ಸುರ್‌ಸುರ್ ಕಡ್ಡಿ, ನಕ್ಷತ್ರ ಕಡ್ಡಿ, ಬೆಳ್ಳಿಪ್ರಕಾಶದ ನಕ್ಷತ್ರಕಡ್ಡಿ, ಪಟಾಕಿ, ಮಾಲೆಪಟಾಕಿ, ನೆಲಚಕ್ರ, ವಿಷ್ಣುಚಕ್ರಗಳನ್ನು ನೋಡುವುದೇ ದೀಪಾವಳಿಯ ನಯನ ಮನೋಹರ ವಿಸ್ಮಯಗಳು. ಹೀಗೆ ಬೆಳಕನ್ನು ಪ್ರತಿಫಲಿಸುವ ದೀಪಗಳ ಆವಳಿ ದೀಪಾವಳಿಯಾಗಿದೆ. ಕೆಲವೊಮ್ಮೆ ದೀಪಗಳ ಹಾವಳಿಯಾಗುತ್ತದೆ. ಕೈಕಾಲು ಸುಟ್ಟುಕೊಂಡು, ಕಣ್ಣುಗಳನ್ನು ಅಪಾಯಕ್ಕೀಡು ಮಾಡುವ ಪಟಾಕಿ ಬಾಂಬುಗಳ ಶಬ್ದಕ್ಕೆ ಹೆದರುವ ಹಬ್ಬ ಇದಾಗಿದೆ. ಕೊರೋನಾ ಪ್ರಾರಂಭವಾಗುವ ಮುನ್ನ ಕೊರೋನಾ ಬಾರದಿರಲೆಂದು ದೀಪ ಹಚ್ಚಿದೆವು. ಈಗ ಕೊರೋನಾ ದೂರವಾಗಲೆಂದು ದೀಪ ಹಚ್ಚೋಣ. ಹೆಚ್ಚು ಹೆಚ್ಚು ಹಚ್ಚಿದ ದೀಪಗಳ ಪ್ರಭೆಗೆ ಪ್ರಭಾವಳಿಗೆ ಕೊರೋನಾ ಪೀಡೆ ತೊಲಗಲೆಂದು ಹಾರೈಸೋಣ.**

With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI

## ಶುಭ ವಿವಾಹ

ಶ್ರೀಮತಿ ಸುನೀತ ಹಾಗೂ ಎಲ್ಲೂರು ಶ್ರೀ ಪ್ರಸಾದ್ ಕುಮಾರ್ ದಂಪತಿಗಳ ಪುತ್ರಿ **ಚಿ। ಸೌ। ದೀಕ್ಷಾ** ಹಾಗೂ ಶ್ರೀಮತಿ ಸುಗುಣ ಹಾಗೂ ಶ್ರೀ ಎಂ.ಕೆ. ಮುರಳೀಧರ ರಾವ್, ತೀರ್ಥಹಳ್ಳಿರವರ ಪುತ್ರ **ಚಿ। ಸಂಕೇತ್ ಕೆ.ಎಂ.** ಇವರ ವಿವಾಹವು ತಾ.04.11.2020ರಂದು ಕನ್ನರ್ಪಾಡಿಯ ಶ್ರೀ ಜಯದುರ್ಗಾ ಸಭಾಭವನದಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಗೀತಾ ಮತ್ತು ಶ್ರೀಯುತ ದಿನಕರ ರಾವ್ ಪಡುಬಿದ್ರೆ ಇವರ ಸುಪುತ್ರ **ಚಿ। ರವಿ ರಾವ್.ಡಿ** ಹಾಗೂ ಶ್ರೀಮತಿ ಪ್ರಸುಮ ಮತ್ತು ಶ್ರೀಯುತ ಸುಬ್ಬರಾವ್ ಪೊಳಲಿ ಇವರ ಸುಪುತ್ರಿ **ಚಿ। ಸೌ। ಸುಪ್ರೀತಾ ರಾವ್**ರವರ ವಿವಾಹವು ತಾ.28.10.2020 ರಂದು ಪೊಳಲಿ ಶ್ರೀ ರಾಜರಾಜೇಶ್ವರಿ ದೇವಿಯ ಸನ್ನಿಧಿಯ ಸರ್ವಮಂಗಲ ಸಭಾಭವನದಲ್ಲಿ ನೆರವೇರಿತು.

★★★★ ★★★★

ಬ್ರಹ್ಮಾವರ ಶ್ರೀ ದಿನಮಣಿ ಶಾಸ್ತ್ರಿ ಹಾಗೂ ಶ್ರೀಮತಿ ಗಾಯತ್ರಿ ಇವರ ಪುತ್ರಿ **ಚಿ। ಸೌ। ಅಶ್ವಿನಿ** ಹಾಗೂ ಬೆಂಗಳೂರು ಶ್ರೀ ರಾಜಾರಾಮ ಪಿಲ್ಲೆಂಕಿ ಹಾಗೂ ಶ್ರೀಮತಿ ಮೀನಾಕ್ಷಿ ಇವರ ಪುತ್ರ **ಚಿ। ಶಶಿತೇಜ** ಇವರ ವಿವಾಹವು ತಾ.22.10.2020ರಂದು ಬ್ರಹ್ಮಾವರದ ಚೆಪ್ಪೆಗಾರ ಸಭಾಭವನದಲ್ಲಿ ನೆರವೇರಿತು.

## ನಿಧನ

### ಕುಂಜಾಲು ಸದಾಶಿವ ರಾವ್

ಕುಂಜಾಲು ಸದಾಶಿವ ರಾವ್ ತಾ.22.10.2020ರಂದು ನಿಧನ ಹೊಂದಿದರು. ಇವರು ಕುಂಜಾರಿನ ವಿಶ್ವ ಕೀರ್ತಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ನಿವೃತ್ತಿ ಹೊಂದಿದ್ದರು.

★★★★ ★★★★

### ಉಮೇಶ್ ರಾವ್

ಶಿರ್ವ ಮಾಣಿಬೆಟ್ಟು ನಿವಾಸಿ ಶಿರ್ವ ಪಂಜಿಮಾರು ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾಗಿದ್ದ ಉಮೇಶ್ ರಾವ್ 27.10.2020ರಂದು ನಿಧನ ಹೊಂದಿದರು.

★★★★ ★★★★

### ಶ್ರೀ ರಾಧಾಕೃಷ್ಣ ರಾವ್

ಕುಕ್ಕಿಕಟ್ಟೆಯ ಶ್ರೀ ರಾಧಾಕೃಷ್ಣ ರಾವ್ ಇವರು 28.10.2020ರಂದು ನಿಧನ ಹೊಂದಿದರು.

★★★★ ★★★★

### ಶ್ರೀ ಸಂತೋಷ ರಾವ್

ವಡಭಾಂಡೇಶ್ವರ ಶ್ರೀ ರಘುರಾಮ ರಾವ್ ಇವರ ಪುತ್ರ ಶ್ರೀ ಸಂತೋಷ ರಾವ್ ತಾ.4.11.2020 ರಂದು ಅಮೇರಿಕಾದಲ್ಲಿ ನಿಧನ ಹೊಂದಿದರು.

★★★★ ★★★★

### ಶ್ರೀ ಕಿಲ್ಲೂರು ವಿಠಲ ಭಟ್

ಶ್ರೀ ಕಿಲ್ಲೂರು ವಿಠಲ ಭಟ್ ಇವರು 7.11.2020 ರಂದು ನಿಧನ ಹೊಂದಿದರು.

★★★★ ★★★★

### ಪಾರ್ವತಿ ಶರ್ಮ

ಅದ್ಯಪಾಡಿ ಪಾರ್ವತಿ ಶರ್ಮ ಇವರು 01.11.2020ರಂದು ಬಜ್ಪೆಯಲ್ಲಿ ನಿಧನ ಹೊಂದಿದರು.

★★★★ ★★★★

### ಇಂದಿರಾ ಬಾಯಿ

ದಿ। ಎನ್.ಶ್ರೀನಿವಾಸ ರಾವ್ ಇವರ ಪತ್ನಿ ಇಂದಿರಾ ಬಾಯಿ ಬಂಟಕಲ್ಲಿನಲ್ಲಿ 5.11.2020 ರಂದು ನಿಧನ ಹೊಂದಿದರು.

★★★★ ★★★★

### ಶ್ರೀಮತಿ ಲೀಲಾವತಿ

ವಿಠಲಾಪುರ ಬಾಬುರಾವ್ ಇವರ ಪತ್ನಿ ಶ್ರೀಮತಿ ಲೀಲಾವತಿ 28.10.2020 ರಂದು ನಿಧನ ಹೊಂದಿದರು.

★★★★ ★★★★

### ಮಹಾದೇವ ಹೆಬ್ಬಾರ್

ಕಬ್ಬಿನಾಲೆ ಕುಚ್ಚೂರು ಮಹಾದೇವ ಹೆಬ್ಬಾರ್ ಇವರು 26.10.2020 ರಂದು ನಿಧನ ಹೊಂದಿದರು.

★★★★ ★★★★

### ರಾಮಕೃಷ್ಣ ರಾವ್

ದೇಲಂತಬೆಟ್ಟು ರಾಮಕೃಷ್ಣ ರಾವ್ ಇವರು 24.10.2020 ರಂದು ನಿಧನ ಹೊಂದಿದರು.

## ಶ್ರೀ ಶಾರದಾ ಮಂಟಪದ ಊಟದ ಕೊಠಡಿ ನವೀಕರಣಕ್ಕೆ ದೇಣಿಗೆ ನೀಡಿದವರು

ಹಿಂದಿನ ಸಂಚಿಕೆಯಿಂದ ಮುಂದುವರಿದುದು :

| | | |
|---|---|---|
| 1 | ಅಲೆವೂರು ಬಾಬು ರಾವ್ ಚಂದ್ರಮ್ಮ | 120000.00 |
| 2 | ಸದಾಶಿವ ಎಮ್.ರಾವ್. ತಂತ್ರಾಡಿ | 31000.00 |
| 3 | ಶ್ರೀಮತಿ ಜ್ಯೋತಿ ಸುಧಾಕರ ರಾವ್, ಕುಂಜಿಬೆಟ್ಟು | 30000.00 |
| 4 | ಸುರೇಶ್ ಶ್ಯಾನುಭಾಗ್, ಬಿನ್ ಬಿ.ವಾಸುದೇವ ರಾವ್, ವಿ.ಪಿ.ನಗರ | 30000.00 |
| 5 | ಟಿ.ರಮೇಶ್ ರಾವ್, ಗುಂಡಿಬೈಲು | 30000.00 |
| 6 | ಎಮ್.ಪಾಲಚಂದ್ರ ರಾವ್, ತೆಜ್ಜರಕಾಡು | 30000.00 |
| 7 | ಯು.ಅರವಿಂದ ಕುಮಾರ್, ಸಂತೋಷ್ ನಗರ | 30000.00 |
| 8 | ಎ.ಶ್ಯಾಮ್ ರಾವ್, ಬಿನ್ ಎ.ಭುಜಂಗ ರಾವ್, ಅಲೆವೂರು | 30000.00 |
| 9 | ಡಾ. ಬಿ.ಎಚ್. ಆನಂದ್ ರಾವ್, ಮಣಿಪಾಲ | 30000.00 |
| 10 | ದತ್ತಾತ್ರೇಯ ರಾವ್, ಮಾರ್ಪಳ್ಳಿ | 30000.00 |
| 11 | ದಿ.ಡಾ.ಪಿ.ಆನಂದ ರಾವ್ ಮುದರಂಗಡಿ ಸ್ಮರಣಾರ್ಥ ಡಾ.ಪಿ.ಬಿ.ರಾವ್‌ರಿಂದ | 30000.00 |
| 12 | ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು | 25000.00 |
| 13 | ಶ್ರೀಮತಿ ಬಿ.ಅಹಲ್ಯ ರಾವ್, ಬೈಲಕೆರೆ, ಉಡುಪಿ | 25000.00 |
| 14 | ಬಪ್ಪನಾಡು ವಿಜಯಕುಮಾರ್ ರಾವ್, ಬೆಂಗಳೂರು | 20000.00 |
| 15 | ಶ್ರೀಮತಿ. ರತ್ನಮ್ಮ ಮತ್ತು ಮಕ್ಕಳು, ನಂದಿಕೂರು | 15000.00 |
| 16 | ಗೋಪಾಲಕೃಷ್ಣ ಕೋಲ್ಪೆ, ವಾದಿರಾಜ ರಸ್ತೆ, ಉಡುಪಿ | 10051.00 |
| 17 | ಕೆ.ಸುಧಾಕರ ರಾವ್ ಮತ್ತು ಶ್ರೀಮತಿ ಜ್ಯೋತಿ ಎಸ್.ರಾವ್, ಕುಂಜಿಬೆಟ್ಟು | 10000.00 |
| 18 | ಮುರಳೀಧರ ದೇವ್ ರಾವ್ ಶಾನುಭಾಗ್, ಸಾಂಗ್ಲಿ | 10000.00 |
| 19 | ಶ್ರೀಮತಿ ಇಂದಿರಾ ದೇವ್ ರಾವ್ ಶಾನುಭಾಗ್, ಸಾಂಗ್ಲಿ | 10000.00 |
| 20 | ಡಾ. ವಿಠಲ ರಾವ್, ಮಣಿಪಾಲ | 10000.00 |
| 21 | ಶ್ರೀಮತಿ ಉಷಾ ಮೋಹನ್‌ದೇವ, ಕುಂಜಿಬೆಟ್ಟು | 10000.00 |
| 22 | ಹರಿನಾರಾಯಣ ಭಂಡಿ.ಪಿ.ಪೆರ್ಡೂರು | 10000.00 |
| 23 | ಕೆ.ಚಂದ್ರಶೇಖರ್ ರಾವ್, ಮಣಿಪಾಲ | 5000.00 |
| 24 | ಉಚ್ಚಿಲ ವಸಂತ್ ರಾವ್, ಬೆಂಗಳೂರು | 5000.001 |
| 25 | ಎಚ್.ನಿತ್ಯಾನಂದ ಶಾನುಭಾಗ್, ಅಂಬಲ್ಪಾಡಿ | 2000.00 |
| 26 | ಪುರುಷೋತ್ತಮ, ಕೆಮ್ಮಣ್ಣು | 2000.00 |

(ಮುಂದುವರಿಯುವುದು)

SAMPATH KUMAR Mobile : 9741508881

TRISHULINI TOURIST

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE




RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

## ಮಾರ್ಪಳ್ಳಿ ನಾಗಪ್ಪಯ್ಯ ಕುಟುಂಬಿಕರ ಅವಗಾಹನೆಗೆ :

ಅನಾದಿ ಕಾಲದಿಂದ ನಮ್ಮ ಕುಟುಂಬದ ಹಿರಿಯರು ಆರಾಧಿಸಿಕೊಂಡು ಬಂದಿದ್ದ ದೈವ ದೇವರ ಮತ್ತು ನಾಗ ಬ್ರಹ್ಮಸ್ಥಾನ ಜೀರ್ಣೋದ್ಧಾರದ ಕಾರ್ಯಕ್ಕೆ ಸಮಿತಿ ರಚಿಸಿಕೊಂಡಿದ್ದು ಈ ಸಮಿತಿಯ ಮುಖಾಂತರ ತಾರೀಕು 12.03.2020 ರಂದು ದೈವ ದೇವರ ಮೂಲಸ್ಥಾನ ಸ್ಥಳ ಇರುವಲ್ಲಿ "ತಾಂಬೂಲ ಪ್ರಶ್ನೆ" ಯನ್ನು ದೈವಜ್ಞರ ಮುಖಾಂತರ ಕುಟುಂಬಿಕರ ಉಪಸ್ಥಿತಿಯಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಕಂಡು ಬಂದ ಹಾಗೆ ಪ್ರಾಯಶ್ಚಿತ್ತಾದಿಗಳನ್ನು ಸಂಬಂಧಪಟ್ಟ ಸ್ಥಳಗಳಿಗೆ ಸಲ್ಲಿಸಿ, ಮೇ 22/23ರಂದು ಭಾಧಾಕರ್ಷಣ ಕಾರ್ಯವನ್ನೆಲ್ಲಾ ಪೂರ್ಣಗೊಳಿಸಿದ್ದೇವೆ. ಈ ಜೀರ್ಣೋದ್ಧಾರದ ಮೊದಲನೆಯ ಹಂತವಾಗಿ ದೈವ ದೇವರ ಗುಡಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವ ಸಲುವಾಗಿ ದಿನಾಂಕ 27.11.2020 ರ ಶುಕ್ರವಾರ ಉತ್ಥಾನ ದ್ವಾದಶಿಯಂದು ಕುಟುಂಬಿಕರ ಉಪಸ್ಥಿತಿಯಲ್ಲಿ ಕರಸೇವೆಯೊಂದಿಗೆ ಭೂಮಿಪೂಜೆ ಸಲ್ಲಿಸಿ "ಶಂಕು ಸ್ಥಾಪನೆ" ನಡೆಸುವುದು ಹಾಗೆಯೇ ಅದೇ ದಿನ ಸದ್ರಿ ಸ್ಥಳದಲ್ಲಿಯೇ ಕುಟುಂಬಿಕರ ಉಪಸ್ಥಿತಿ ಹಾಗೂ ಸಾಮೂಹಿಕ/ಹೃದಯ ಪೂರ್ವಕ ದೃಢ ಸಂಕಲ್ಪದೊಂದಿಗೆ (ಸಾಮೂಹಿಕ ಸಂಕಲ್ಪಕ್ಕೆ ಅವಕಾಶವಿದೆ) ಶ್ರೀ ಸತ್ಯನಾರಾಯಣ ಪೂಜೆಯನ್ನೂ ನಡೆಸಿ ಪ್ರಸಾದ ಸ್ವೀಕಾರ ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ. ಆದುದರಿಂದ ನಮ್ಮ ಮಾರ್ಪಳ್ಳಿ ಕುಟುಂಬದ ಸದಸ್ಯರೆಲ್ಲರಿಗೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೈವ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

**ಕುಟುಂಬಿಕರ ಉಪಸ್ಥಿತಿಯನ್ನು ಸಹಕಾರವನ್ನೂ ಸದಾ ಬಯಸುವ.....**

**ಎಂ.ಆರ್. ವಾಸುದೇವ**
**ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ (9448125412)**
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
**ಲಕ್ಷ್ಮೀನಾರಾಯಣ್ ರಾವ್ ಎಮ್., ಕಾರ್ಯದರ್ಶಿ (9448347696)**

**ಮಂಗಳೂರು ತೆಂಕುತಿಟ್ಟಿನ ಯಕ್ಷಗಾನದ ಪ್ರಸಿದ್ಧ ಮೇರು ಭಾಗವತರಾದ ಶ್ರೀಯುತ ಪಟ್ಲ ಸತೀಶ ಶೆಟ್ಟಿಯವರ ನೇತೃತ್ವದಲ್ಲಿ ತಾ.27-11-2020ರಲ್ಲಿ ಪ್ರಾರಂಭವಾಗುವ ತಿರುಗಾಟದ ಈ ಶುಭ ಮುಹೂರ್ತದಲ್ಲಿ "ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ಕೃಪಾ ಪೋಷಿತ" ಎಂಬ ದಿವ್ಯ ಭವ್ಯ ಮೇಳದ ಪ್ರಾರಂಭವು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಪ್ರೇರಣೆ ಆಶೀರ್ವಾದದ ಮೇರೆಗೆ ಸನಾತನ, ಆಧ್ಯಾತ್ಮಿಕ, ಸಾಂಸ್ಕೃತಿಕ, ಪೌರಾಣಿಕ, ಕಥಾಭಾಗಗಳನ್ನು ಆಧರಿಸಿ ಜನಸಾಮಾನ್ಯರ ಸೇವೆಗೆ ಅನುಗುಣವಾಗಿ ಅವಕಾಶವನ್ನು ಒದಗಿಸಿ ಕೊಟ್ಟಿರುವ ಶ್ರೀಯುತ ಎಂ.ಶಶೀಂದ್ರ ಕುಮಾರ್ ಆಡಳಿತ ಮೊಕ್ತೇಸರರು ಹಾಗೂ ಡಾ.ಎಚ್.ನಿರಂಜನ ಭಟ್ ಧರ್ಮದರ್ಶಿಗಳಿಗೂ ಶ್ರೀಯುತ ಪಟ್ಲ ಸತೀಶ್ ಶೆಟ್ಟಿ ಸಾರಥ್ಯಧಾರಿಗಳಿಗೂ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಕೃಪೆಗೆ ಸಿದ್ಧಿ ಆಗಲೆಂದು ಪ್ರಾರ್ಥಿಸುತ್ತೇವೆ.**

**ಕೆ.ವಿ. ರಾವ್**
**ಪತಂಜಲಿ ಯೋಗಪೀಠ, ಹರಿದ್ವಾರ**
**ಸ್ವಾಭಿಮಾನ ಭಾರತ ಯೋಗ ಸಾಧಕ ಪ್ರಚಾರಕರು (8668345831)**

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.03-12-2020 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.17-11-2020 ಹಾಗೂ ತಾ.15-12-2020 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.19-11-2020, ಮತ್ತು ತಾ.05-12-2020 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವೃಶ್ಚಿಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16-11-2020 | ಬಲಿಪಾಡ್ಯ, ಅಂಗಡಿಪೂಜೆ, ಶರದೃತು, ಕಾರ್ತಿಕ ಮಾಸದ ಶುಕ್ಲಪಕ್ಷಾರಂಭ, ವೃಶ್ಚಿಕ ಸಂಕ್ರಮಣ | 01-12-2020 | ಶರದೃತು, ಕಾರ್ತಿಕ ಮಾಸದ ಕೃಷ್ಣಪಕ್ಷಾರಂಭ |
| | | 03-12-2020 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 8.35 |
| 25-11-2020 | ಸರ್ವೈಕಾದಶೀ | 11-12-2020 | ಸರ್ವೈಕಾದಶಿ |
| 27-11-2020 | ಉತ್ಥಾನ ದ್ವಾದಶಿ, ತುಳಸೀ ಪೂಜೆ, ಉಡುಪಿ ಲಕ್ಷದೀಪ ಆರಂಭ | 14-12-2020 | ಅಮಾವಾಸ್ಯೆ |
| | | 15-12-2020 | ಹೇಮಂತ ಋತು, ಮಾರ್ಗಶಿರ ಮಾಸದ ಶುಕ್ಲಪಕ್ಷಾರಂಭ, ಧನು ಸಂಕ್ರಮಣ |
| 30-11-2020 | ಹುಣ್ಣಿಮೆ, ಉಡುಪಿ ಲಕ್ಷದೀಪ ಸಮಾಪ್ತಿ | | |

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

**L.No.31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ. ಉಡುಪಿ-576101.**

### 2019-2020ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ, ತಾ. : 24-10-2020

ನಮ್ಮ ಸಂಘದ 2019-2020ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.06.12.2020ನೇ ರವಿವಾರ ಪೂರ್ವಾಹ್ನ ಘಂಟೆ 11-00ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡಾವಳಿಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಆಡಳಿತ ಮಂಡಳಿಯ ನಿರ್ಣಯದಂತೆ**

**ಪಟ್ಟಾಭಿರಾಮ ಎನ್.ಎಸ್**
ಕಾರ್ಯದರ್ಶಿ

**ಕೆ. ವೇಣುಗೋಪಾಲ್ ರಾವ್**
ಅಧ್ಯಕ್ಷರು

**ಕಾರ್ಯಕ್ರಮ ಸೂಚಿ**

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
4. ತಾ:08-09-2019ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
5. 2019-2020ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
6. 2019-2020ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ ಮತ್ತು ಅಂಗೀಕಾರ.
7. 2019-2020ನೇ ಸಾಲಿನ ಅಂದಾಜು ಆಯ-ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
8. 2020-2021ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
9. 2019-2020ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
10. 2020-2021ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
11. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.
12. ವಂದನಾರ್ಪಣೆ

ವಿ.ಸೂ. :

1. **ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.**
2. **ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶದ ಹಣವನ್ನು ನಿಯಮದಂತೆ ಸೊಸೈಟಿಯ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.**
3. **ಸಹಕಾರ ಕಾಯ್ದೆ ಹಾಗೂ ಸಂಘದ ಉಪನಿಯಮಗಳನ್ವಯ ಸದಸ್ಯರು 5 ಮಹಾಸಭೆಗಳಲ್ಲಿ ಕಡ್ಡಾಯವಾಗಿ 3 ಮಹಾಸಭೆಗಳಿಗೆ ಹಾಜರಾಗಬೇಕು ಮತ್ತು ಸತತ 3 ವರ್ಷಗಳ ಕಾಲ ನಿಗದಿತ ಕನಿಷ್ಠ ವ್ಯವಹಾರವನ್ನು ಮಾಡಬೇಕಾಗಿದ್ದು, ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.**

## ಸಾಂಕ್ರಾಮಿಕ

ಭಾಮಿನಿ ಷಟ್ಪದಿ-
ಕೊರೋನ ಎಂಬುದು ಜಗದ ಜನರಲಿ।
ಸರಸರನೆ ಹರಡುತಿಹ ವ್ಯಾಧಿಯು।
ಭರದಿ ಸಾಯುತಲಿಹರು ಜನಗಳು ರೋಗಬಾಧೆಯಲಿ।
ಪರಸ್ಥಳಕ್ಕೆ ಹೋದವರು ಮರಳುತ
ಲಿರುವ ಸಮಯದೊಳಿದನು ತರುವರು।
ಪರಮ ಸಂತೋಷದಲಿ ಜೊತೆಗಾರರಿಗೆ ಹಂಚುವರು।

ಉಸಿರುಕಟ್ಟುವ ಜತೆಗೆ ನೆಗಡಿಯು।
ಅಸಮಾ, ಮೈ ಕೈ ನೋವು, ಮೂಗಲಿ
ಉಸಿರು ತಾನಾಡುವರೆ ಕಷ್ಟಗಳಿತರ ತೊಂದರೆಯು।
ಬಸಿರು, ಬಾಣಂತಿಯರಿಗಲ್ಲದೆ
ಎಸೆವ ವೃದ್ಧರು, ರೋಗಿಗಳು ತಾವು
ಹಸೆಯ ಹಿಡಿಯುತ ಮಲಗಿ ಬಿಡುವರು ವಾರ ಪರಿಯಂತ.

## ಸಾಂಕ್ರಾಮಿಕ

ಜಗದಲಿ ಸುಲಭದಿ ಹರಡುವ ರೋಗವು।
ಕೊರೋನ ಎನ್ನುವ ಕಾಯಿಲೆಯು॥
ಮೂಗು, ಬಾಯಿಗಳ ಮೂಲಕ ಹರಡುವ।
ಸಾಂಕ್ರಾಮಿಕ ಗುಣ ಹೊಂದಿಹುದು॥

ಮುಖಗವಸುಗಳಲಿ ಮೂಗನು ಮುಚ್ಚುತ।
ಹೊರಗಡೆ ಹೋಗದೆ ಮನೆಯೊಳಗೆ॥
ಪರರಿಂದಾರಡಿ ದೂರದಿ ನಿಲ್ಲುತ।
ಕೈಗಳ ಸೋಪಿಂ ತೊಳೆಯುತಲಿ॥

ಜನಗಳ ಜಾತ್ರೆಯನೆಂದೂ ಸೇರದೆ।
ಏಕಾಂತದೆ ವೇಳೆಯ ಕಳೆದು॥
ಹಬ್ಬ ಹುಣ್ಣಿಮೆಗಳ ಸಂಭ್ರಮ ದಿನಗಳ।
ಸಂಪೂರ್ಣದಿ ತ್ಯಜಿಸುತಲಿಹುದು॥

**- ಹರಿದಾಸ ಮ.ನಾ. ಹೆಬ್ಬಾರ್**

## ನವಿಲು

ಮೂರೊತ್ತು ಕುಣಿಯುತ್ತ ಮನಸೆಳೆದ ನವಿಲೇ
ಇಂದು ನೀನೆಲ್ಲಿ ಅವಿತು ಕೂತಿರುವೆ
ರೆಕ್ಕೆಯನು ಬಡಿಯುತ್ತ ಗರಿಯನ್ನು ಬಿಡಿಸುತ್ತ
ಪ್ರೀತಿ ಚಿಗುರುವ ಹಾಗೆ ನೀ ತೋರಿ ಬಿಟ್ಟೆ.

ಮುಂಜಾನೆ ತೋಟದಲಿ ಆ ಮೇಲೆ ಹಿತ್ತಲಲಿ
ನನ್ನ ಮನವನು ಪೂರ್ತಿ ನೀ ನುಂಗಿ ಬಿಟ್ಟೆ
ನಿನ್ನ ಬಣ್ಣದ ಗರಿಯು ನನಗೆ ಅಂಟಿದ್ದರೆ
ನಿನ್ನಂತೆ ನಾನು ಕುಣಿದಾಡುತ್ತಿದ್ದೆ.

ಹಗಲೆಲ್ಲ ಮನದಲ್ಲಿ ಇರುಳೆಲ್ಲ ಕನಸಲ್ಲಿ
ನಿನ್ನ ಅಂದವೆ ನನ್ನ ಕಣ್ಣರೆಪ್ಪೆಯ ಒಳಗೆ
ನೀ-ನಿರು ನನ್ನೊಡನೆ ನಿನ್ನನ್ನೆ ಪ್ರೀತಿಸುವೆ
ನಿನ್ನ ಅಂದಕೆ ನಾನು ಮರುಳು ಮಂಕಾದೆ.

ತಕ್ಕಿಟ ತರಿಕಿಟ ಎನ್ನುತ್ತ ನಿನ್ನೊಡನೆ
ಕುಣಿದಾಡಿ ನಾನು ನನ್ನೆ ಮೈ ಮರೆವೆ
ಅವಿತು ಕೂತಿರುವ ಓ ನನ್ನ ನವಿಲೇ
ನನ್ನೆಡೆ ಬಂದೊಮ್ಮೆ ಮೊಗವನ್ನು ತೋರೆ.



**-ಶ್ರೀಮತಿ ರಮಾದೇವಿ ರಾವ್**

## ಯೋಧ

ತಾಯಿಯ ಮಡಿಲಿಂದ ಜಾರಿ
ಹಿಡಿದೆ ದೇಶ ಸೇವೆಯ ದಾರಿ
ಕಂಗಳಲಿ ವಂದನೆಯ ಬೀರಿ
ಭಾರತಾಂಬೆಗೆ ನೀ ಜಯಭೇರಿ.

ಹಿಮದ ಗಿರಿಗಳನು ನೀ ಕಡಿದೆ
ಬಂದೂಕ ಗೋಲಿಗಳನು ಸಿಡಿದೆ
ವೈರಿಗಳ ಪಡೆಯ ಹೊಡೆ ಬಡಿದೆ
ಪ್ರಾಣದ ಹಂಗನು ನೀ ತೊರೆದೆ.

ಕಲ್ಲು ಬಂಡೆಗಳೇ ನಿನಗೆ ಹಾಸಿಗೆ
ಹಿಮಗಿರಿಯಲೂ ಕಂಡೆ ಬೇಸಿಗೆ
ದೇಶದುದ್ದಗಲಕೆ ನೀ ಕೈ ಚಾಚಿದೆ
ಮಳೆ ಮರಿಜಿನ ಹೊಡೆತಕಂಜದೆ.

ಇರುಳಾಯು ನಿನಗದು ಹಗಲು
ದೇಶಕ್ಕಾಗಿ ಕೊಟ್ಟೆ ಆ ನಿನ್ನ ಹೆಗಲು
ಗುಂಡಿನ ದನಿ ಮುಟ್ಟಿತು ಮುಗಿಲು
ವೈರಿಗಳ ಮನದಲಿ ಭಯ ಭುಗಿಲು.

ಹೊಡೆದುರುಳಿಸಿದೆ ಏರಿ ವಿಮಾನ
ಸಿಡಿದೊಡೆದ ವೈರಿಗಳ ತಂಗುದಾಣ
ನೀರ ತೆರೆಯಲೂ ಹೊಡೆದೆನೀ ಬಾಣ
ದೇಶಕೆ ಮುಡಿಪಾಯ್ತು ಆ ನಿನ್ನ ಪ್ರಾಣ.

ಹೆತ್ತ ಮಾತೆಯ ನುಡಿ ಓ ನನ್ನ ಕುಡಿ
ಸೇರಿತದಿಂದು ಭಾರತಾಂಬೆಯ ಗುಡಿ
ದೇಶ ರಕ್ಷೆಯ ಕಾರ್ಯವ ನೀ ಹಿಡಿ
ದ್ರೋಹಿಗಳನು ಹಿಡಿದೊಡೆದು ಬಡಿ.

**ರಚನೆ : ಉಮೇಶ್ ರಾವ್.ಕೆ (ಉ ರಾ ಕೆ)**

## ಶ್ರೇಷ್ಠರು

ಹಾವು ಗೆದ್ದಲಿನ ಹುತ್ತವನು ಹೊಕ್ಕು
ತಾನದರ ಒಡೆಯನಾದನಂತೆ
ಸ್ವಾರ್ಥ ಮನುಜನೆದೆ ಹೊಕ್ಕು
ಆಟವಾಡಿಸುತಲಿದೆ
ಸೂತ್ರ ಧಾರಿಯಂತೆ
ಮನುಜ ಕುಣಿಯುತಲಿದ್ದಾನೆ
ಅದರ ತಾಳಕ್ಕೆ ಮೇಳಕ್ಕೆ
ತನ್ನ ತನವ ಮರೆವ
ತನ್ನವರನ್ನೆ ಮರೆವ
ತನ್ನವರನ್ನೆ ಸುಡುವ
ಈ ಸ್ವಾರ್ಥವ ಬಿಡಲಾಗದು
ನಾನು ನನ್ನದು ಅದುವೇ ಪ್ರಪಂಚ
ಕೊಳದ ಕಪ್ಪೆಯಂತೆ
ನಾವೇ ಶ್ರೇಷ್ಠರು?
ಅಲ್ಲಾ, ಶ್ರೇಷ್ಠರೆಂದು
ಕರೆದುಕೊಂಡೆರು.


**-ಎಂ.ಗಣೇಶ್ ರಾವ್, ಶಿಕ್ಷಕರು ಬಾರಕೂರು.**


Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. Laxmi Prasad**

ಕಾರ್ಯಕಾರಿಣಿ ಮಂಡಳಿ ಸದಸ್ಯರು
**D. K. District Used Vehicle Dealers & Agents Association (R.), Mangalore**
**Flat No. 103, Deepa Residency, Near Preethi Apartment**
**Kodiyalguttu West, Kodiyalbail, MANGALORE - 575 003**
Mob. : 9845644489, 9964236997 E-mail : laxmiprasad5010@gmail.com

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್ : 2556536 (R), 2555466 (O), Mobile : 9845149521**
**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**
**ಪ್ರೊ।। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


**ಎಮ್. ದೇವಾನಂದ್ ಭಟ್** Cell : 9845644556
**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

*With Best Complimemts From*
**SRI M. SHAILESH RAO** Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**

**Buying and selling shares as easy as checking your emails**
**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013. Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)




ಇಂಜಿನಿಯರ್ ಶ್ರೀ ರಾಘವೇಂದ್ರ ಕಿಣಿಯವರಿಗೆ ಸನ್ಮಾನ


ಸಭೆಗೆ ಸೇರಿದ ಜನಸ್ತೋಮ


ಭೋಜನ ಶಾಲೆಯ ಗೋಡೆಯ ಮೇಲಿನ ಚಿತ್ರಚಿತ್ತಾರ


ನೂತನ ಯಾಗಶಾಲೆಯಲ್ಲಿ ಚಂಡಿಕಾಯಾಗ


ಮಹಿಳಾ ವೇದಿಕೆಯಿಂದ ಭಜನೆ


ಸಂಘದ ನೌಕರರಿಗೆ ಸತ್ಕಾರ




*With Best Compliments from :*



***Dr. Sanath S. Rao***
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ
ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | :5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | :8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)


2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

**With Best Compliments From :**

*****Rajathadri Hotel Pvt. Ltd.**
Lodging & Boarding

Sri Ramesh Shanubhag, Usha, Sanketh and Kavitha
Directors



**OUR FACILITIES**
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

## ಅಂತರಾಷ್ಟ್ರೀಯ ಟೇಕ್ವಾಂಡೋ ಪ್ರಶಿಕ್ಷಕರಾಗಿ ಶ್ರೀಪಾದ ಆರ್.ರಾವ್ ಉತ್ತೀರ್ಣ



ಸ್ವಿಜರ್ಲ್ಯಾಂಡಿನ ಲ್ಯೂಸ್ಯಾನಲ್ಲಿರುವ ವಿಶ್ವ ಟೇಕ್ವಾಂಡೋ ಫೆಡರೇಶನ್ ಇತ್ತೀಚೆಗೆ ಆಯೋಜಿಸಿದ್ದ ಅಂತರಾಷ್ಟ್ರೀಯ ಪ್ರಶಿಕ್ಷಕ ಕೋರ್ಸ್‌ನಲ್ಲಿ ಉಡುಪಿ ಜಿಲ್ಲೆಯ ಇನ್ನಂಜೆ (ಉಂಡಾರು) ಗ್ರಾಮದವರಾದ ಟೇಕ್ವಾಂಡೋ ಕ್ರೀಡೆಯ ತರಬೇತುದಾರ ಶ್ರೀಪಾದ ರವಿ ರಾವ್ ಅವರು ಭಾಗವಹಿಸಿದ್ದರು. ಕೋರ್ಸ್ ಮುಗಿಸಲು ಬೇಕಾದ ಅಂತಿಮ ಲಿಖಿತ ಪರೀಕ್ಷೆಯಲ್ಲಿ ಶ್ರೀಪಾದ ಆರ್.ರಾವ್ ಅವರು 90% ಅಂಕಗಳನ್ನು ಗಳಿಸಿ, ಅಸಾಮಾನ್ಯ ಸಾಧನೆ ತೋರಿಸುವ ಮೂಲಕ ಅಂತರಾಷ್ಟ್ರೀಯ ಪ್ರಶಿಕ್ಷಕರಾಗಿ ಗೌರವಗಳಿಸಿದ್ದಾರೆ. ಕೋರ್ಸಿನಲ್ಲಿ (WT Competition Rules) ಡಬ್ಲ್ಯುಟಿ ಸ್ಪರ್ಧೆಯ ನಿಯಮಗಳು, (Games Management) ಆಟಗಳ ನಿರ್ವಹಣೆ, (Medical Code and Emergency Cases) ವೈದ್ಯಕೀಯ ಕೋಡ್ ಮತ್ತು ತುರ್ತು ಪ್ರಕರಣಗಳು, (Safe Guarding), ಸೇಫ್ ಗಾರ್ಡಿಂಗ್ ಹಾಗೂ (Anti-Doping) Dan ಡೋಪಿಂಗ್ ನಂತಹ ವಿಷಯಗಳ ಕುರಿತು ಶಿಕ್ಷಣ ನೀಡಲಾಗಿತು.

ಪ್ರಸುತ ಇವರು ಬೆಳಗಾವಿಯಲ್ಲಿ ವಾಸವಾಗಿದ್ದು ಭಾರತೀಯ ವಾಯುಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕೋರ್ಸ್‌ನಲ್ಲಿ ಗ್ರೇಟ್ ಬ್ರಿಟನ್, ಜಾರ್ಜಿಯಾ, ಜಪಾನ್, ನಾರ್ವೆ, ಸ್ಪೇನ್ ಮತ್ತು ಭಾರತ ಸೇರಿದಂತೆ 6 ದೇಶಗಳ 55 ರಾಷ್ಟ್ರ ಮಟ್ಟದ ಟೇಕ್ವಾಂಡೋ ಪ್ರಶಿಕ್ಷಕರು ಭಾಗವಹಿಸಿದ್ದರು.

## ಮುಂಬಯಿ ಬಾಲಚಂದ್ರ ರಾವ್ ನಿಧನ



ಮುಂಬಯಿ ಸಂಘದ ಮಾಜಿ ಅಧ್ಯಕ್ಷ, ನಟ, ನಿರ್ದೇಶಕ, ಲೇಖಕ, ಸಂಘಟಕ, ಸಮಾಜ ಸೇವಕ, ಹಾಗೂ ಮುಂಬಯಿ ಕನ್ನಡ ಕಲಾಕೇಂದ್ರದ ಅಧ್ಯಕ್ಷ ಬೈಲೂರು ಬಾಲಚಂದ್ರ ರಾವ್ ಅವರು 18–10–2020 ರಂದು ನಿಧನ ಹೊಂದಿದರು. ಕಾರ್ಕಳ ತಾಲೂಕಿನ ಬೈಲೂರಿನ ಲಕ್ಷ್ಮೀನಾರಾಯಣ ರಾವ್ ಮತ್ತು ಜಲಜಾಕ್ಷಿ ದಂಪತಿಯ ಪುತ್ರನಾಗಿ 1945ರ ಏಪ್ರಿಲ್ 15ರಂದು ಬಾಲಚಂದ್ರ ರಾವ್ ಅವರ ಜನನ. ಮೆಕ್ಯಾನಿಕಲ್ ಇಂಜಿನಿಯರಿಂಗ್, ಡಿಪ್ಲೋಮಾ ಇನ್ ಬಿಸಿನೆಸ್ ಮ್ಯಾನೇಂಜ್ಮೆಂಟ್ ಪದವೀಧರರಾಗಿದ್ದ ಇವರು 1969 ರಿಂದ 2005 ರವರೆಗೆ 36 ವರ್ಷ ನೇವಲ್ ಡಾಕ್ ಯಾರ್ಡ್ ಇಂಡಿಯನ್ ನೇವಿಯಲ್ಲಿ ಉದ್ಯೋಗ ಮಾಡಿ ನಿವೃತ್ತರಾಗಿದ್ದರು. ಇಂಡಿಯನ್ ನೇವಿಯಲ್ಲಿ ಬಾಲಚಂದ್ರರಾವ್ ಅವರ ಕಾರ್ಯಸಾಧನೆಗಾಗಿ ಬೆಸ್ಟ್ ಆಫೀಸರ್ ಆಫ್ ದ ಇಯರ್, ವೆಸ್ಟರ್ನ್ ನೇವಲ್ ಕಮಾಂಡ್, ಇಂಡಿಯನ್ ನೇವಿ ಪೂರ್ವಸ್ಟಾರ್, ಪಶ್ಚಿಮಸ್ಟಾರ್ (ಯುದ್ಧ ಪದಕಗಳು) ಮುಂತಾದ ಅನೇಕ ಪ್ರಶಸ್ತಿಗಳು ಲಭಿಸಿದ್ದವು.



ಕರಂದಾಡಿ ಶಾನುಭೋಗರ ಮನೆಯಲ್ಲಿ ಕುಟುಂಬಿಕರ ಕೂಡುವಿಕೆಯಿಂದ ಜರಗಿದ ನವರಾತ್ರಿ ಚಂಡಿಕಾಯಾಗ

### ನವರಾತ್ರಿ ದುರ್ಗಾನಮಸ್ಕಾರ 2020ರ ಸೇವಾ ವಿವರ

1. ಎಸ್.ಎಂ. ರಾವ್, ತಂತ್ರಾಡಿ
2. ಗೋಪಾಲಕೃಷ್ಣ ಕೋಲ್ಪೆ, ಉಡುಪಿ
3. ಡಾ। ಸಂತೋಷ್ ರಾವ್, ಚಿಟ್ಪಾಡಿ
4. ವೈ.ವಿಠಲ ರಾವ್, ಚಿಟ್ಪಾಡಿ
5. ಸುರೇಶ್ ಶಾನುಭಾಗ್, ವಿ.ಪಿ.ನಗರ
6. ಸರ್ವಜ್ಞ ರಾವ್, ಚಿಟ್ಪಾಡಿ
7. ವಾದಿರಾಜ ರಾವ್, ಬನ್ನಂಜೆ
8. ಕೃಷ್ಣಕುಮಾರ್ ರಾವ್, ಮಟ್ಟು
9. ಹರಿನಾರಾಯಣ ಭಂಡಿ, ಪೆರ್ಡೂರು
10. ಡಾ। ಸುದರ್ಶನ್ ರಾವ್, ಕುಕ್ಕಿಕಟ್ಟೆ
11. ಡಾ। ಪಿ.ಗೋಪಾಲಕೃಷ್ಣ, ಮಾರ್ಪಳ್ಳಿ
12. ಡಾ। ಅನುಪಮಾ ರವಿಶಂಕರ್ ರಾವ್
13. ಹರಿಶ್ಚಂದ್ರ ರಾವ್.ಬಿ., ಮಣಿಪಾಲ
14. ಡಾ। ಲೋಕೇಶ್ ರಾವ್
15. ಮ.ನಾ.ಹೆಬ್ಬಾರ್
16. ಶ್ರೀಮತಿ ಜ್ಯೇಷ್ಠಾ ಸುಬ್ರಹ್ಮಣ್ಯ ರಾವ್, ಕುಕ್ಕಿಕಟ್ಟೆ
17. ದತ್ತಾತ್ರೇಯ ರಾವ್, ಮಾರ್ಪಳ್ಳಿ
18. ಯು.ಅರವಿಂದ ಕುಮಾರ್, ಸಂತೋಷನಗರ
19. ಅಲೆವೂರು ಪ್ರಭಾಕರ ರಾವ್
20. ಡಾ। ಶ್ಯಾಮ ರಾವ್
21. ಕೆ.ಸುರೇಶ್ ರಾವ್, ಕುತ್ಪಾಡಿ
22. ಕೆ.ಮಂಜುನಾಥ ಹೆಬ್ಬಾರ್



**ಚಿ। ಡಾ। ಆಶಿಶ್ ರಾವ್** ಎಂ.ಎಸ್(ಇ.ಎನ್.ಟಿ)

**ಹಾಗೂ ಚಿ। ಸೌ। ಡಾ। ನಾಗಶ್ರೀ ಭಾರದ್ವಾಜ್**

ಡಾ। ಕ್ಯಾಪ್ಟನ್ ಪಿ.ಸತೀಶ್ ರಾವ್, ಮಕ್ಕಳ ತಜ್ಞರು ಬೆಂಗಳೂರು ಮತ್ತು ಶ್ರೀಮತಿ ನಯನ ದಂಪತಿಗಳ ಪುತ್ರ ಚಿ। ಡಾ। ಆಶಿಶ್ ರಾವ್, M.S. ENT ಹಾಗೂ ಶ್ರೀಮತಿ ಸುಮ ಮತ್ತು ಶ್ರೀಯುತ ಜಗನ್ನಾಥ್ ಅವರ ಪುತ್ರಿ ಚಿ। ಸೌ। ಡಾ। ನಾಗಶ್ರೀ ಭಾರದ್ವಾಜ್ ಇವರ ವಿವಾಹವು ತಾ.29.10.2020ರಂದು ಹಾಸನದ ಶ್ರೀ ಅನ್ನಪೂರ್ಣೇಶ್ವರಿ ಕಲ್ಯಾಣ ಮಂಟಪದಲ್ಲಿ ಗುರು ಹಿರಿಯರ ಆಶೀರ್ವಾದಗಳೊಂದಿಗೆ ನೆರವೇರಿತು.

**ನೂತನ ವಧುವರರಿಗೆ ಶುಭಾಶಯಗಳನ್ನು ಕೋರುವ :**

ಬಂಧುಮಿತ್ರರು

–: ಶುಭಾಶಯಗಳು :–



**“ಶ್ರೀ ಶಾರದಾಂಬೆಗೆ ವಂದಿಸುತ್ತಾ “ಶ್ರೀ ಶಾರದಾ” ಪತ್ರಿಕೆಯು ನವರಸಭರಿತವಾಗಿ ಸಮಾಜಕ್ಕೆ ದಾರಿದೀಪವಾಗಲಿ” ಎಂದು ಹಾರೈಸುವ**

ಜಿ.ಕೆ.ಕೋಲ್ಪೆ, ಉಡುಪಿ




ತಂತ್ರಾಡಿ ವಿಶ್ವನಾಥ ಶಾನುಭೋಗ್

94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

“ಶ್ರೀರಂಗ ”, ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ವೃಂದಾವನ್ ನೆಸ್ಟ್

ಶುದ್ಧ ಸಸ್ಯಾಹಾರಿ

ಎನ್.ಎಚ್. 66. ಕಟಪಾಡಿ, ಉಡುಪಿ

ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ

ಮೊಬೈಲ್:7899990960



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


ಹೋಟೇಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಷ್ಣು ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ





Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org